quickmarketreports.com

Date : 24-10-2015

# ರಾಬಿ ಬೆಳೆಯ ಗೋಧಿ ಬಿತ್ತನೆ 33.33% ಹೆಚ್ಚಳ (2015–16)

ಅಕ್ಟೋಬರ್ 23, 2015ರ ತನಕ ಒಟ್ಟು ರಾಬಿ ಬೆಳೆಯ ಬಿತ್ತನೆಯಲ್ಲಿ 62.44% ಹೆಚ್ಚಳವಾಗಿದ್ದು, ಹಿಂದಿನ ವರ್ಷದ 17.36 ಲಕ್ಷ ಹೆಕ್ಟೇರ್‌ಗಳ ಬದಲಾಗಿ ಈ ವರ್ಷ 28.20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆಯೆನ್ನಲಾಗಿದೆ. ಈ ವರ್ಷ ರಾಬಿ ಬೆಳೆಯ ಬೇಳೆಕಾಳು ಬಿತ್ತನೆ ಹಿಂದಿನ ವರ್ಷದ ರಾಬಿ ಬಿತ್ತನೆಯಾದ 4.75ಲಕ್ಷ ಹೆಕ್ಟೇರ್ ಪ್ರದೇಶದ ಬದಲಾಗಿ 8.83 ಲಕ್ಷ ಹೆಕ್ಟೇರ್ ಪ್ರದೇಶದಲ್ಲಾಗಿದ್ದು ಇಮ್ಮಡಿಯಾಗಿ ಹೆಚ್ಚಳವಾಗಿದೆಯೆನ್ನಲಾಗಿದೆ. ಗೋಧಿ ಈ ವರ್ಷದ ರಾಬಿ ಬಿತ್ತನೆ 33.33 ಶೇಕಡಾ ಹೆಚ್ಚಳವಾಗಿ, ಹಿಂದಿನ ರಾಬಿ ಬೆಳೆಯ ಬಿತ್ತನೆಯಾದ 15000 ಹೆಕ್ಟೇರ್‌ಗಳಿಂದ 20000 ಹೆಕ್ಟೇರ್‌ಗಳಿಗೆ 2015–16 ರಲ್ಲಿ ಹೆಚ್ಚಳವಾಗಿದೆಯೆನ್ನಲಾಗಿದೆ.

ಕೋರ್ಸ್ ಸೀರೆಲಾಸ್ ಬಿತ್ತನೆ 2015–16ರ ರಾಬಿ ಬೆಳೆಗೆ 16.57 ಲಕ್ಷ ಹೆಕ್ಟೇರ್‌ಗಳಲ್ಲಾಗಿದ್ದು ಹಿಂದಿನ ರಾಬಿ ಬೆಳೆಗೆ 11.19 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆಯಾಗಿತ್ತು. ಈ ರಾಬಿ ಸೀಸನ್‌ನಲ್ಲಿ 48.07 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಎಣ್ಣೆ ಬೀಜಗಳ ಬಿತ್ತನೆ 2015–16ರ ರಾಬಿ ಬೆಳೆಗೆ 1.50ಲಕ್ಷ ಹೆಕ್ಟೇರ್ ಪ್ರದೇಶದಲ್ಲಾಗಿದ್ದು, ಹಿಂದಿನ ರಾಬಿ ಬೆಳೆಯಲ್ಲಿ 1.28 ಲಕ್ಷ ಹೆಕ್ಟೇರ್ ಪ್ರದೇಶದಲ್ಲಾಗಿತ್ತು ಮತ್ತು ಈಗಿನ ರಾಬಿ ಬೆಳೆಯಲ್ಲಿ 25 ಶೇಕಡಾ ಹೆಚ್ಚಳವಾಗಿದೆಯೆಂದು ಭಾರತ ಸರಕಾರದ ಕೃಷಿ ಸಚಿವಾಲಯದ ದತ್ತಾಂಶಗಳಿಂದ ತಿಳಿದುಬಂದಿದೆ.